# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1483 |
| 3 | ಉತ್ತರಿಸಬೇಕಾದ ದಿನಾಂಕ | : | 24.09.2021 |
| 4 | ಉತ್ತರಿಸುವ ಸಚಿವರು | : | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗಳ ವಿವಿಧ ಇಂಜಿನಿಯರಿಂಗ್ ವಿಭಾಗಗಳಲ್ಲಿ ಹಲವು ದಶಕಗಳಿಂದ ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಯಿಂದ ವಿವಿಧ ವೃಂದದ ಇಂಜಿನಿಯರ್‌ಗಳ ಸೇವೆಯನ್ನು ಪಡೆದು ನೇಮಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಸಂಪೂರ್ಣ ವಿವರ ನೀಡುವುದು; | **ಹೌದು.**<br>ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ದಿ:24.05.2008ರಂದು ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿದ್ದು, ಇದಕ್ಕೂ ಪೂರ್ವದಲ್ಲಿ ಯಾವುದೇ ನೇಮಕಾತಿಗಳನ್ನು ಸದರಿ ಇಲಾಖೆಗೆ ಮಾಡಲಾಗಿಲ್ಲ. ಅಲ್ಲದೇ ನೇಮಕಾತಿ ನಿಯಮಗಳನ್ನು ರಚಿಸಿದ ನಂತರವೂ ಸಹ 2015ನೇ ಸಾಲಿನವರೆಗೆ ಯಾವುದೇ ನೇಮಕಾತಿಗಳನ್ನು ಮಾಡಿಲ್ಲದ ಕಾರಣ ಪಂ.ರಾ.ಇಂ. ಇಲಾಖೆಗೆ ಮಂಜೂರಾದ ಎಲ್ಲಾ ಹುದ್ದೆಗಳಿಗೆ ಲೋಕೋಪಯೋಗಿ ಇಲಾಖೆಯ / ರಾಜ್ಯ ಲೆಕ್ಕಪತ್ರ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳ ಸೇವೆಯನ್ನು ನಿಯೋಜನೆ ಮೇಲೆ ಪಡೆಯಲಾಗುತ್ತಿತ್ತು. |
| (ಆ) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ತನ್ನ ಅಧೀನದಲ್ಲಿ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಲು ಸಹಾಯಕ ಇಂಜಿನಿಯರ್ ಹುದ್ದೆಗಳನ್ನು ಸೃಷ್ಟಿಸಿ ಇಲಾಖೆಯಿಂದ ನೇರ ನೇಮಕಾತಿ ಮಾಡಿಕೊಂಡಿರುವುದು ನಿಜವೇ; ಹಾಗಿದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು; | ಪಂ.ರಾ.ಇಂ. ಇಲಾಖೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿದ ನಂತರ ಲೋಕೋಪಯೋಗಿ ಇಲಾಖೆಯ ವಿವಿಧ ವೃಂದಗಳ ಅಧಿಕಾರಿ / ನೌಕರರುಗಳು ಪಂರಾಇಂ. ಇಲಾಖೆಯಲ್ಲಿ ಶಾಶ್ವತವಾಗಿ ವಿಲೀನಗೊಳ್ಳಲು ಅವಕಾಶವನ್ನು ನೀಡಲಾಗಿತ್ತು. ಅದರಂತೆ ಇಚ್ಛಾ ಪತ್ರಗಳನ್ನು ಪಡೆದು ಅದನ್ನು ಲೋಕೋಪಯೋಗಿ ಇಲಾಖೆಗೆ ಕಳುಹಿಸಲಾಗಿತ್ತು. ಈ ಪ್ರಕ್ರಿಯೆಯಲ್ಲಿ ಕೇವಲ 64 ಅಧಿಕಾರಿ / ನೌಕರರುಗಳ ಸೇವೆಯನ್ನು ಮಾತ್ರ ಲೋಕೋಪಯೋಗಿ ಇಲಾಖೆಯು ಶಾಶ್ವತ ವಿಲೀನಾತಿಗೆ ನೀಡಿದ್ದು, ಇಲಾಖೆಯ ವಿವಿಧ ಕಾಮಗಾರಿಗಳ ಅನುಷ್ಠಾನದ ಹಿತದೃಷ್ಟಿಯಿಂದ ಮಿಕ್ಕುಳಿಕೆ ವೃಂದದಲ್ಲಿ 140 ಸಹಾಯಕ ಇಂಜಿನಿಯರ್‌ಗಳನ್ನು ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಮೀಸಲಿರಿಸಿದ ಹುದ್ದೆಗಳಡಿಯಲ್ಲಿ 64 ಸಹಾಯಕ ಇಂಜಿನಿಯರ್‌ಗಳನ್ನು 2016ನೇ ಸಾಲಿನಲ್ಲಿ ನೇಮಿಸಿಕೊಳ್ಳಲಾಗಿದೆ. |

7

| | | |
|---|---|---|
| (ಇ) | ಮಾತ್ರ ಇಲಾಖೆಯಾದ ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯನ್ನೊಳಗೊಂಡಂತೆ ಹಲವು ಇಲಾಖೆಗಳಲ್ಲಿರುವ ಹುದ್ದೆಗಳನ್ನು ತನ್ನ ವೃಂದಬಲದಲ್ಲಿ ಸೇರಿಸಿಕೊಂಡು ಹಲವು ದಶಕಗಳಿಂದ ಅಸಿಸ್ಟೆಂಟ್ ಇಂಜಿನಿಯರ್ ವೃಂದದ ಹುದ್ದೆಗಳ ನೇಮಕಾತಿ ಮಾಡುತ್ತಿರುವುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸಂಪೂರ್ಣ ವಿವರ ನೀಡುವುದು: | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವ್ಯಾಪ್ತಿಯಲ್ಲಿನ ಪಂ.ರಾ.ಇಂ. ಇಲಾಖೆ ಹಾಗೂ ಗ್ರಾ.ಕು.ನೀ.& ನೈ. ಇಲಾಖೆಗೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಗೆ ನಿಗದಿಪಡಿಸಿರುವ ಹುದ್ದೆಗಳನ್ನು ಮಾತ್ರ ಭರ್ತಿ ಮಾಡುವ ದಿಸೆಯಲ್ಲಿ ಈ ಇಲಾಖೆಯ ವತಿಯಿಂದ ಕ್ರಮವಹಿಸಲಾಗಿದ್ದು, ಲೋಕೋಪಯೋಗಿ ಇಲಾಖೆ ಅಥವಾ ಬೇರೆ ಯಾವುದೇ ಇಲಾಖೆಯ ಪರವಾಗಿ ಯಾವುದೇ ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡಿರುವುದಿಲ್ಲ.<br><br>ಪಂ.ರಾ.ಇಂ. ಇಲಾಖೆಯಲ್ಲಿ 2016ನೇ ಸಾಲಿನಲ್ಲಿ ನೇರ ನೇಮಕಾತಿ ಮೂಲಕ ಮಿಕ್ಕುಳಿಕೆ ವೃಂದದಲ್ಲಿ 140 ಸಹಾಯಕ ಇಂಜಿನಿಯರ್‌ಗಳನ್ನು ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಮೀಸಲಿರಿಸಿದ ಹುದ್ದೆಗಳಡಿಯಲ್ಲಿ 64 ಸಹಾಯಕ ಇಂಜಿನಿಯರ್‌ಗಳನ್ನು ನೇಮಕಾತಿ ಮಾಡಲಾಗಿದೆ.<br><br>ಇತ್ತೀಚೆಗೆ ಗ್ರಾ.ಕು.ನೀ.& ನೈ. ಇಲಾಖೆಗೆ ಮಂಜೂರಾದ ಸಹಾಯಕ ಇಂಜಿನಿಯರ್ ಹುದ್ದೆಗಳ ಪೈಕಿ 2021-22ನೇ ಸಾಲಿಗೆ 188 ಹಾಗೂ 2022-23ನೇ ಸಾಲಿಗೆ 100 ಹುದ್ದೆಗಳು ಒಟ್ಟಾರೆ 288 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆರ್ಥಿಕ ಇಲಾಖೆಯು ಸಹಮತಿ ನೀಡಿದೆ. ಅದರನ್ವಯ ಇಲಾಖಾ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ. |
| (ಈ) | ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯನ್ನೊಳಗೊಂಡಂತೆ ಇತರೆ ಇಲಾಖೆಗಳಲ್ಲಿ ವಿವಿಧ ವೃಂದದ ಹುದ್ದೆಗಳಿಗೆ ಆ ವೃಂದದ ಸಂಖ್ಯಾಬಲದ ಮೇಲೆ ಪದೋನ್ನತಿ ನೀಡುತ್ತಿರುವುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಗಮನದಲ್ಲಿದೆಯೇ; (ಸಂಪೂರ್ಣ ವಿವರ ನೀಡುವುದು) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವ್ಯಾಪ್ತಿಯಲ್ಲಿನ ಪಂ.ರಾ.ಇಂ. ಇಲಾಖೆ ಮತ್ತು ಗ್ರಾ.ಕು.ನೀ. ಮತ್ತು ನೈ. ಇಲಾಖೆಗಳಲ್ಲಿ ವಿವಿಧ ವೃಂದಗಳಿಗೆ ಮಂಜೂರಾದ ಹುದ್ದೆಗಳ ಪೈಕಿ ಮುಂಬಡ್ತಿ ಕೋಟಾಕ್ಕೆ ಲಭ್ಯವಾಗುವ ಹುದ್ದೆಗಳನ್ನು ಆಧರಿಸಿ ಕಾಲ ಕಾಲಕ್ಕೆ ಮುಂಬಡ್ತಿಯನ್ನು ನೀಡಲು ಇಲಾಖಾ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ. |
| (ಉ) | ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ನೀರಾವರಿ, ನಗರಾಭಿವೃದ್ಧಿ ಇಲಾಖೆಗಳಲ್ಲಿ ಮಾತೃ ಇಲಾಖೆಯಿಂದ ಅನ್ಯ ಇಲಾಖೆಯಲ್ಲಿ ಎರವಲು ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದವರನ್ನು ಆಯಾಯ ಇಲಾಖೆಗಳಲ್ಲಿ ವಿಲೀನಗೊಳಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿರುವುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಗಮನಕ್ಕೆ ಬಂದಿಲ್ಲವೇ; (ಸಂಪೂರ್ಣ ವಿವರ ನೀಡುವುದು) | ಈಗಾಗಲೇ ಲೋಕೋಪಯೋಗಿ ಇಲಾಖೆಯ ವಿವಿಧ ವೃಂದಗಳ ಹುದ್ದೆಗಳನ್ನು ಜಲಸಂಪನ್ಮೂಲ ಇಲಾಖೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ ಹಂಚಿಕೆ ಮಾಡುವ ಸಂಬಂಧ ಈ ಮೂರು ಇಲಾಖೆಗಳು ನಿಗಧಿತ ವಿಧಿ ವಿಧಾನಗಳನ್ನು ಅನುಸರಿಸಿ ವಿಲೀನಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆ.<br><br>ಅದರನ್ವಯ ಗ್ರಾಕುನೀ. ಮತ್ತು ನೈ. ಇಲಾಖೆ ಹಾಗೂ ಪಂ.ರಾ.ಇಂ. ಇಲಾಖೆಗಳಲ್ಲಿ ವಿಲೀನಾತಿ ಹೊಂದಿದ ವಿವಿಧ ವೃಂದಗಳ ಅಧಿಕಾರಿ / ಸಿಬ್ಬಂದಿಗಳ ವಿವರಗಳನ್ನು ಅನುಬಂಧ 1 & 2ರಲ್ಲಿ ಲಗತ್ತಿಸಿದೆ. |

| | | |
|---|---|---|
| (ಊ) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ವಿಲೀನ ಪ್ರಕ್ರಿಯೆ ಕಾರ್ಯಗತಗೊಳಿಸುವ ಮುನ್ನವೇ ತರಾತುರಿಯಲ್ಲಿ ಇಲಾಖೆ ನೇಮಕಾತಿ ಮಾಡಿದ ಅಸಿಸ್ಟೆಂಟ್ ಇಂಜಿನಿಯರ್‌ಗಳಿಗೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಹುದ್ದೆಗೆ ಪದೋನ್ನತಿ ನೀಡಿರುವುದು ಸಮ್ಮತವೇ(ನೇಮಕಾತಿ ಮತ್ತು ಪದೋನ್ನತಿ ನೀಡಲು ರೂಪಿಸಿರುವ ನಿಯಮಗಳನ್ನೊಳಗೊಂಡಂತೆ ಸಂಪೂರ್ಣ ವಿವರ ನೀಡುವುದು) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ಮೂಲ ಸೌಕರ್ಯಗಳಾದ ಕುಡಿಯುವ ನೀರು, ನೈರ್ಮಲ್ಯ ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗ ನೀಡುವಂತಹ ಯೋಜನೆಗಳ ಅನುಷ್ಠಾನದ ಜವಾಬ್ದಾರಿಯನ್ನು ಹೊಂದಿರುತ್ತದೆ.<br><br>ಪಂ.ರಾ.ಇಂ. ಇಲಾಖೆಗೆ ಮಂಜೂರಾದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದಲ್ಲಿ ಬಹಳಷ್ಟು ಹುದ್ದೆಗಳು ಖಾಲಿಯಿದ್ದ ಕಾರಣ ಸದರಿ ಕಾಮಗಾರಿಗಳ ಅನುಷ್ಠಾನದಲ್ಲಿ ಬಹಳಷ್ಟು ನ್ಯೂನತೆಗಳು ಮತ್ತು ಸಮಸ್ಯೆಗಳು ಉಂಟಾಗಿರುತ್ತದೆ. ಹಾಗಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೇರ ನೇಮಕಾತಿ ಹೊಂದಿದ ಸಹಾಯಕ ಇಂಜಿನಿಯರ್‌ಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಸಹಾಯಕ ಕಾರ್ಯಪಾಲಕ ಅಭಿಯಂತರರ ವೃಂದಕ್ಕೆ ಮುಂಬಡ್ತಿಯನ್ನು ನೀಡಲಾಗಿದೆ. ಅದರಂತೆ ಮಿಕ್ಕುಳಿಕೆ ವೃಂದದಲ್ಲಿ 46 ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ 20 ಒಟ್ಟು 66 ಸಹಾಯಕ ಅಭಿಯಂತರರುಗಳಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿದೆ. |

**ಗ್ರಾಅಪ 134 ಜಿಪಅ 2021**

**(ಕೆ.ಎಸ್.ಈಶ್ವರಪ್ಪ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

# ಅನುಬಂಧ-1

## ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಾತಿ ಹೊಂದಿದ ವಿವಿಧ ವೃಂದಗಳ ಅಧಿಕಾರಿ/ಸಿಬ್ಬಂದಿಗಳ ವಿವರಗಳು (2013 ರಿಂದ 14ನೇ ಸಾಲಿನವರೆಗೆ)

| ಕ್ರ.ಸಂ. | ವಿವಿಧ ವೃಂದಗಳ ಇಂಜಿನಿಯರ್‌ಗಳು | ವಿಲೀನಾತಿ ಹೊಂದಿದ ಇಂಜಿನಿಯರ್‌ಗಳ ಸಂಖ್ಯೆ |
|---|---|---|
| 1. | ಕಾರ್ಯಪಾಲಕ ಇಂಜಿನಿಯರ್ | 04 |
| 2. | ಸ.ಕಾ.ಇಂ. | 16 |
| 3. | ಸಹಾಯಕ ಇಂಜಿನಿಯರ್ | 36 |
| 4. | ಕಿರಿಯ ಇಂಜಿನಿಯರ್ | 08 |
| | **ಒಟ್ಟು** | **64** |

## 2020ನೇ ಸಾಲಿನಲ್ಲಿ ವಿಲೀನಾತಿ ಹೊಂದಿದ ಅಧಿಕಾರಿ/ಸಿಬ್ಬಂದಿಗಳ ವಿವರಗಳು

| ಕ್ರ.ಸಂ. | ಹುದ್ದೆ/ಪದನಾಮ | ಸಂಖ್ಯೆ |
|---|---|---|
| 1. | ಕಾರ್ಯಪಾಲಕ ಇಂಜಿನಿಯರ್ | 09 |
| 2. | ಸ.ಕಾ.ಇಂ.(ವಿಭಾಗ-1) | 30 |
| 3. | ಸ.ಕಾ.ಇಂ.(ವಿಭಾಗ-2) | 12 |
| 4. | ಸಹಾಯಕ ಇಂಜಿನಿಯರ್ (ವಿಭಾಗ-1) | 32 |
| 5. | ಸಹಾಯಕ ಇಂಜಿನಿಯರ್(ವಿಭಾಗ-2) | 48 |
| 6. | ಕಿರಿಯ ಇಂಜಿನಿಯರ್ | 61 |
| 7. | ಲೆಕ್ಕಾಧೀಕ್ಷಕರು | 12 |
| 8. | ಪ್ರಥಮ ದರ್ಜೆ ಲೆಕ್ಕ ಸಹಾಯಕರು | 23 |
| 9. | ಪ್ರ.ದ.ಸ. | 41 |
| 10. | ದ್ವಿ.ದ.ಸ. | 62 |
| 11. | ದ್ವಿ.ದ.ಲೆ.ಸ | 04 |
| 12. | ಶೀಘ್ರಲಿಪಿಗಾರರು | 08 |
| 13. | ಬೆರಳಚ್ಚುಗಾರರು | 15 |
| 14. | ಗ್ರೂಪ್ 'ಡಿ' | 28 |
| **ಒಟ್ಟು** | | **385** |

# ಅನುಬಂಧ-2

## 2020ನೇ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆಯಲ್ಲಿ ವಿಲೀನಾತಿ ಹೊಂದಿದ ವಿವಿಧ ವೃಂದಗಳ ಅಧಿಕಾರಿ/ಸಿಬ್ಬಂದಿಗಳ ವಿವರಗಳು

| ಕ್ರ.ಸಂ. | ಹುದ್ದೆ/ಪದನಾಮ | ಸಂಖ್ಯೆ |
|---|---|---|
| 1. | ಅಧೀಕ್ಷಕ ಇಂಜಿನಿಯರ್ | 03 |
| 2. | ಕಾರ್ಯಪಾಲಕ ಇಂಜಿನಿಯರ್ | 14 |
| 3. | ಸ.ಕಾ.ಇಂ.(ವಿಭಾಗ-1) | 21 |
| 4. | ಸ.ಕಾ.ಇಂ.(ವಿಭಾಗ-2) | 08 |
| 5. | ಸಹಾಯಕ ಇಂಜಿನಿಯರ್ (ವಿಭಾಗ-1) | 51 |
| 6. | ಸಹಾಯಕ ಇಂಜಿನಿಯರ್(ವಿಭಾಗ-2) | 60 |
| 7. | ಕಿರಿಯ ಇಂಜಿನಿಯರ್ | 52 |
| 8. | ಲೆಕ್ಕಾಧೀಕ್ಷಕರು | 01 |
| 9. | ಅಧೀಕ್ಷಕರು | 12 |
| 10. | ಪ್ರಥಮ ದರ್ಜೆ ಲೆಕ್ಕ ಸಹಾಯಕರು | 14 |
| 11. | ಪ್ರ.ದ.ಸ. | 33 |
| 12. | ದ್ವಿ.ದ.ಸ. | 73 |
| 13. | ದ್ವಿ.ದ.ಲೆ.ಸ | 08 |
| 14. | ಶೀಘ್ರಲಿಪಿಗಾರರು | 13 |
| 15. | ಬೆರಳಚ್ಚುಗಾರರು | 01 |
| 16. | ವಾಹನ ಚಾಲಕರು | 06 |
| 17. | ಗ್ರೂಪ್ 'ಡಿ' | 20 |
| **ಒಟ್ಟು** | | **390** |